ವಿಜಯವಾಣಿ
ಕನ್ನಡಿಗರ ಧ್ವನಿ

**Wednesday 02nd November 2022, Page No.5B**

**Principal at the kannada Rajyotsava organized by RV College**

ವಿಜಯವಾಣಿ

# ಅನ್ಯ ರಾಜ್ಯದವರಿಗೆ ಕನ್ನಡ ಕಲಿಸಬೇಕು

## ಆರ್.ವಿ. ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ ಸಲಹೆ

**ಬೆಂಗಳೂರು:** ರಾಜಧಾನಿಯಲ್ಲಿ ನೆಲೆಸಿರುವ ಅನ್ಯರಾಜ್ಯದವರಲ್ಲಿ ಕನ್ನಡ ಭಾಷೆಯ ಅರಿವನ್ನು ಮೂಡಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೆ. ಎನ್. ಸುಬ್ರಮಣ್ಯ ಹೇಳಿದ್ದಾರೆ.

ರಾಜ್ಯೋತ್ಸವದ ಅಂಗವಾಗಿ ಮೈಸೂರು ರಸ್ತೆಯಲ್ಲಿರುವ ಮಹಾವಿದ್ಯಾಲಯದಲ್ಲಿ ಮಂಗಳವಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಬೆಂಗಳೂರು ಇಂದು ದೊಡ್ಡ ಮಹಾನಗರವಾಗಬೇಕಾದರೆ ಅದಕ್ಕೆ ಕನ್ನಡಿಗರ ಉದಾರ ಮನಸ್ಸು ಕಾರಣ. ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಕನ್ನಡಿಗರೇ ಇಲ್ಲ, ಬೇರೆ ಬೇರೆ ರಾಜ್ಯದವರೇ ವಾಸಿಸುತ್ತಿದ್ದಾರೆ. ಅವರಲ್ಲಿಯೂ ಕನ್ನಡ ಭಾಷೆಯ ಅರಿವನ್ನು ಮೂಡಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಇಂಜಿನಿಯರಿಂಗ್ ವಿದ್ಯಾರ್ಥಿಗಳು ಕನ್ನಡ ಪುಸ್ತಕಗಳನ್ನು ಹೆಚ್ಚಾಗಿ ಓದಬೇಕು. ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಿ ಕೊಳ್ಳಬೇಕು. ಗ್ರಾಮೀಣ ಭಾಗದವರಿಗೆ ಕನ್ನಡದಲ್ಲಿಯೇ ಬಿಇ ಪದವಿಯನ್ನು ಹೇಳಿಕೊಡಲಾಗುತ್ತಿದೆ. ವಿದ್ಯಾರ್ಥಿಗಳು ಎಲ್ಲ ರೀತಿಯ ಕನ್ನಡ ಸಾಹಿತ್ಯ ಪುಸ್ತಕಗಳನ್ನು ಓದಿ, ತಾಂತ್ರಿಕ ಪುಸ್ತಕಗಳನ್ನು ಬರೆಯಲು ಪ್ರಯತ್ನಿಸಬೇಕು ಎಂದು ಹೇಳಿದರು.

ಆರ್‌ವಿಸಿಇ ಕನ್ನಡ ಸಂಘದ ಮುಖ್ಯಸ್ಥರಾದ ವಿಕ್ರಮ್ ಎನ್. ಬಹದ್ದೂರ ದೇಸಾಯಿ, ರಾಜಲಕ್ಷ್ಮೀ ಮೂಡಬಿದ್ರೆ ಮತ್ತಿತರರಿದ್ದರು.



ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಜ್ಯೋತ್ಸವದಲ್ಲಿ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ, ಆರ್‌ವಿಸಿಇ ಕನ್ನಡ ಸಂಘದ ಮುಖ್ಯಸ್ಥರಾದ ವಿಕ್ರಮ್ ಎನ್. ಬಹದ್ದೂರ ದೇಸಾಯಿ ಮತ್ತಿತರರಿದ್ದರು.